# ಕೇಂದ್ರೀಯ ಹತ್ತಿ ಸಂಶೋಧನಾ ಸಂಸ್ಥೆ, ನಾಗಪುರ, ಮಹಾರಾಷ್ಟ್ರ

*[ಭಾರತೀಯ ಕೃಷಿ ಅನುಸಂಧಾನ ಪರಿಷತ್ತು (ಭಾ. ಕೃ. ಅ. ಪ), ಕೃಷಿ ಮಂತ್ರಾಲಯ, ಭಾರತ ಸರ್ಕಾರ]*

## ಹತ್ತಿ ಬೆಳೆಯ ಸಾಪ್ತಾಹಿಕ ಸಲಹೆ, 08 ರಿಂದ 14 ಅಕ್ಟೋಬರ್ 2026 ರ ಅವಧಿಗೆ

*"ಈ ಸಲಹೆಯು ರಾಜ್ಯ ಕೃಷಿ ವಿಶ್ವವಿದ್ಯಾನಿಲಯಗಳಿಂದ ಸ್ವೀಕರಿಸಿದ ಮಾಹಿತಿಯನ್ನು ಆಧರಿಸಿದೆ"*

### ಅ. ಮಣ್ಣಿನ ಆರೋಗ್ಯ, ಪೋಷಣೆ, ಹಾಗೂ ಕೀಟ ಮತ್ತು ರೋಗ ನಿರ್ವಹಣೆಯ ಕುರಿತಾದ ಸಾಮಾನ್ಯ ಸಲಹೆ

ಹೆಚ್ಚಿನ ಹತ್ತಿ ಇಳುವರಿಯು ಸಮತೋಲಿತ ಮಣ್ಣಿನ ಪೋಷಣೆ, ನೀರಿನ ನಿರ್ವಹಣೆ ಮತ್ತು ಪೂರ್ವಭಾವಿ ನಿರೀಕ್ಷಣೆ ಆಧಾರಿತ ಕೀಟ ಮತ್ತು ರೋಗ ನಿರ್ವಹಣೆಯನ್ನು ಅವಲಂಬಿಸಿದೆ. ಸಂಪೂರ್ಣ ಮತ್ತು ಸಮಗ್ರ ಬೆಳೆ ನಿರ್ವಹಣಾ ಯೋಜನೆಯನ್ನು ಅನುಷ್ಠಾನಗೊಳಿಸುವುದರಿಂದ ಸರಿಯಾದ ಬೆಳವಣಿಗೆ ಮತ್ತು ಚೈತನ್ಯವನ್ನು ಖಚಿತಪಡಿಸುವುದರೊಂದಿಗೆ ಬೇಸಾಯ ವೆಚ್ಚವನ್ನು ಕಡಿಮೆ ಮಾಡುತ್ತದೆ. ಇದಲ್ಲದೇ, ಬೆಳೆಯನ್ನು ವಿನಾಶಕಾರಿ ಕೀಟ ಮತ್ತು ರೋಗ ಹಾನಿಯಿಂದ ರಕ್ಷಿಸುತ್ತದೆ.

### ಮಣ್ಣಿನ ಆರೋಗ್ಯ ಮತ್ತು ಪೋಷಕಾಂಶ ನಿರ್ವಹಣೆ (INM)

- **ಸೂಕ್ಷ್ಮ ಪೋಷಕಾಂಶಗಳನ್ನು ಅತ್ಯುತ್ತಮವಾಗಿಸಿ:** ಬೆಳೆ ತಿರುಗುವಿಕೆ, ಸಾವಯವ ಗೊಬ್ಬರ ಮತ್ತು ಹೊದಿಕೆ ಬೆಳೆಗಳಿಗೆ ಆದ್ಯತೆ ನೀಡುವ ಮೂಲಕ ಮತ್ತು ಬಿತ್ತನೆ ಪೂರ್ವ ಮಣ್ಣಿನ ಪರೀಕ್ಷೆಯ ಆಧಾರದ ಮೇಲೆ ತರ್ಕಬದ್ಧ ರಾಸಾಯನಿಕ ಗೊಬ್ಬರವನ್ನು ಬಳಸುವ ಮೂಲಕ ಮಣ್ಣಿನ ಆರೋಗ್ಯವನ್ನು ಸುಧಾರಿಸಿ.

- **ಸೂಕ್ಷ್ಮ ಪೋಷಕಾಂಶಗಳನ್ನು ಅನ್ವಯಿಸಿ:** ಅಗತ್ಯವಿರುವಂತೆ ಉದ್ದೇಶಿತ ಸಿಂಪಡಣೆಗಳ ಮೂಲಕ ದ್ವಿತೀಯ ಮತ್ತು ಸೂಕ್ಷ್ಮ ಪೋಷಕಾಂಶಗಳ ಕೊರತೆಗಳನ್ನು (ಸತು, ಬೋರಾನ್, ಮ್ಯಾಂಗನೀಸ್ ಮತ್ತು ಮೆಗ್ನೀಸಿಯಮ್‌ನಂತಹ) ಪೂರ್ವಭಾವಿಯಾಗಿ ಪರಿಹರಿಸಿ.

### ರೋಗ ನಿರ್ವಹಣೆ (IDM)

- **ರೋಗ ತಡೆಗಟ್ಟುವ ಪದ್ಧತಿಗಳನ್ನು ನಿಯೋಜಿಸಿ:** ಮಣ್ಣಿನಿಂದ ಹರಡುವ ಮತ್ತು ಎಲೆಗಳಿಂದ ಹರಡುವ ರೋಗಕಾರಕಗಳ ನಿರ್ವಹಣೆಯನ್ನು ಸಮಗ್ರ ಕೃಷಿ ಪದ್ಧತಿಗಳ ಮೂಲಕ ಸಾಧಿಸಬೇಕು, ಇದರಲ್ಲಿ ಸರಿಯಾದ ಕ್ಷೇತ್ರ ನೈರ್ಮಲ್ಯ, ಜೈವಿಕ ಕೀಟನಾಶಕಗಳು ಮತ್ತು ಜೈವಿಕ ಗೊಬ್ಬರಗಳನ್ನು ಬೀಜ ಮತ್ತು ಮಣ್ಣಿನ ಉಪಚಾರಗಳಾಗಿ ಅನ್ವಯಿಸುವುದು, ಸಸ್ಯ ಆರೋಗ್ಯವನ್ನು ಹೆಚ್ಚಿಸಲು ಮತ್ತು ರೋಗದ ಸಂಭವವನ್ನು ನಿಗ್ರಹಿಸಲು ಸಹಾಯ ಮಾಡುತ್ತದೆ.
- **ಏಕಾಏಕಿ ರೋಗ ಪ್ರಸಾರ ನಿಯಂತ್ರಣ:** ಹೆಚ್ಚಿನ ಆರ್ದ್ರತೆಯ ಅವಧಿಯಲ್ಲಿ ನಿಯಮಿತ ಕ್ಷೇತ್ರ ಮೇಲ್ವಿಚಾರಣೆಯನ್ನು ಕೈಗೊಳ್ಳಬೇಕು ಮತ್ತು ಚಾಲ್ತಿಯಲ್ಲಿರುವ ಪರಿಸರ ಪರಿಸ್ಥಿತಿಗಳು ತ್ವರಿತ ರೋಗ ಬೆಳವಣಿಗೆ ಮತ್ತು ಹರಡುವಿಕೆಗೆ ಅನುಕೂಲಕರವಾದಾಗ ಮಾತ್ರ ಶಿಫಾರಸು ಮಾಡಲಾದ ಶಿಲೀಂಧ್ರನಾಶಕಗಳನ್ನು ವಿವೇಚನೆಯಿಂದ ಅನ್ವಯಿಸಬೇಕು.

### ಸಮಗ್ರ ಕೀಟ ನಿರ್ವಹಣೆ (IPM)

- ಕ್ಷೇತ್ರ ಶೋಧನೆ ನಡೆಸುವುದು: ಕಾಯಿಕೊರಕಗಳ ಜೊತೆಗೆ ರಸ ಹೀರುವ ಕೀಟಗಳನ್ನು (ಥ್ರಿಪ್ಸ್ ನುಸಿ , ಹೇನು, ಜಿಗಿ ಹುಳುಗಳು, ಮತ್ತು ಜೇಡ ಹುಳಗಳು) ನಿರೀಕ್ಷಣೆ ಮಾಡಲು ವಾರಕ್ಕೊಮ್ಮೆ ಕ್ಷೇತ್ರ ಶೋಧನೆ ಮಾಡಿ.
- ಜಿಗುಟು ಬಲೆ ಮತ್ತು ಜೈವಿಕ ಕೀಟನಾಶಕಗಳನ್ನು ಬಳಸಿ: ವಯಸ್ಕ ಪತಂಗಗಳ ಹಾರಾಟವನ್ನು ಪತ್ತೆಹಚ್ಚಲು ಹಾಗೂ ಮೊಟ್ಟೆ ಇಡುವ ಚಕ್ರಗಳನ್ನು ಊಹಿಸಲು ಋತುವಿನ ಆರಂಭದಲ್ಲಿ ಲಿಂಗಾಕರ್ಷಕ ಬಲೆಗಳನ್ನು ನೆಡಬೇಕು. ಪ್ರಾಥಮಿಕ ಪ್ರತಿಕ್ರಿಯೆಯಾಗಿ ಸಾವಯವ, ನೈಸರ್ಗಿಕ ಅಥವಾ ಸಸ್ಯ ಆಧಾರಿತ ಕೀಟನಾಶಕಗಳನ್ನು ಸಿಂಪಡಿಸಬೇಕು.
- ನೈಸರ್ಗಿಕ ಮಿತ್ರಕೀಟಗಳನ್ನು ಸಂರಕ್ಷಿಸಿ: ವ್ಯಾಪಕ ವ್ಯಾಪ್ತಿಯ ರಾಸಾಯನಿಕಗಳಿಗಿಂತ ನಿರ್ದಿಷ್ಟ ಕೀಟನಾಶಕಗಳನ್ನು ಆರಿಸುವ ಮೂಲಕ ಮಿತ್ರ ಕೀಟಗಳ ಸಂರಕ್ಷಣೆ ಮಾಡಬೇಕು.
- ರಾಸಾಯನಿಕ ಬಳಕೆ ನಿರ್ಬಂಧಿಸಿ: ಕೀಟಗಳ ಸಂಖ್ಯೆಯು ಆರ್ಥಿಕ ಗರಿಷ್ಟ ಮಿತಿಯನ್ನು ತಲುಪಿದಾಗ ಮಾತ್ರ, ಲೇಬಲ್-ಶಿಫಾರಸು ಮಾಡಿದ ರಾಸಾಯನಿಕ ಕೀಟನಾಶಕಗಳನ್ನು ಕೊನೆಯ ಉಪಾಯವಾಗಿ ಬಳಸಬೇಕು.

## ಬ. ನಿರ್ದಿಷ್ಟ ಸ್ಥಳಕ್ಕೆ ಸಂಬಂಧಿಸಿದ ಸಲಹೆ

| ಕರ್ನಾಟಕ | ಕಳೆದ ವಾರದಲ್ಲಿ ಬಿದ್ದ ಮಳೆಯ ವಿವರ (ಮಿ.ಮೀ) | | | | | | | IMDಯ ಪ್ರಕಾರ ಮಳೆಯ ಮುನ್ಸೂಚನೆ (ಮಿ.ಮೀ) | | | | |
|---|---|---|---|---|---|---|---|---|---|---|---|---|
| ತಿಂಗಳು | ಸೆಪ್ಟೆಂಬರ್/ಅಕ್ಟೋಬರ್ | | | | | | | | | | | |
| ದಿನಾಂಕ | 29 | 30 | 01 | 02 | 03 | 04 | 05 | 07 | 08 | 09 | 10 | 11 |
| ಧಾರವಾಡ | 0 | 0.8 | 25.8 | 0 | 0 | 0 | 0 | 0.1 | 0.2 | 0.1 | 0.1 | 0.1 |
| ಹಾವೇರಿ | 0 | 0 | 2.6 | 0 | 0 | 0 | 0 | 0.6 | 0.1 | 0.1 | 0.2 | 0.1 |
| ಮೈಸೂರು | 0 | 0 | 12.5 | 0 | 0 | 0 | 0 | 14 | 5.5 | 3.6 | 4.3 | 6.1 |

| ಮಳೆಯ ಮಾಹಿತಿಯ ಮಾದರಿ | | | | | | ಮಳೆಯ ಮಾಹಿತಿಯ ಮೂಲ: |
|---|---|---|---|---|---|---|
| ಮಳೆಯ ಪ್ರಮಾಣ (ಮಿ.ಮೀ) | 0.1-2.4 | 2.5-15.5 | 15.6-64.4 | 64.5-115.5 | 115.6-204.4 | http://nwp.imd.gov.in/bias/dist_fcst.htm |

**ಬೆಳೆಯ ಸ್ಥಿತಿ:**
ಧಾರವಾಡದಲ್ಲಿ, ಬೆಳೆಯು ಹೂಬಿಡುವ ಹಂತದಿಂದ ಕಾಯಿ ಕಟ್ಟುವ ಹಂತದವರೆಗೆ 92 ರಿಂದ 97 ದಿನಗಳ ಅವಧಿಯದಾಗಿರುತ್ತದೆ. ಕೆಲವು ಹೊಲಗಳಲ್ಲಿ ಕಳೆಗಳ ಬಾಧೆ ಕಂಡುಬಂದಿದೆ. ಮೂತಿ ಹುಳು, ಎಲೆ ಜಿಗಿ ಹುಳು ಮತ್ತು ಹೇನುಗಳ ಬಾಧೆ ಕಡಿಮೆ ಪ್ರಮಾಣದಲ್ಲಿದ್ದರೆ, ಥ್ರಿಪ್ಸ್ ನುಸಿ ಬಾಧೆ ಮಧ್ಯಮ ಪ್ರಮಾಣದಲ್ಲಿ ಕಂಡುಬಂದಿದೆ. ಅಲ್ಲದೆ, ಕೆಲವು ಹೊಲಗಳಲ್ಲಿ ಕೆಲವು ಹೊಲಗಳಲ್ಲಿ ಆಲ್ಟರ್ನೇರಿಯಾ ಎಲೆ ಅಂಗಮಾರಿ ರೋಗವು ಕಡಿಮೆ ಅಥವಾ ಮಧ್ಯಮ ಪ್ರಮಾಣದಲ್ಲಿ ಕಂಡುಬಂದರೆ, ಸೊರಗು ರೋಗದ ಪ್ರಮಾಣವು ಕಡಿಮೆ ಪ್ರಮಾಣದಲ್ಲಿ ಕಂಡುಬಂದಿದೆ. ಬೂದು ರೋಗದ ಯಾವುದೇ ಲಕ್ಷಣಗಳು ಕಂಡುಬಂದಿಲ್ಲ.

ರಾಯಚೂರಿನಲ್ಲಿ, ಬಿತ್ತನೆ ಮಾಡಿದ ಬೆಳೆಯು 101 ದಿನಗಳದ್ದಾಗಿದ್ದು, ಒಟ್ಟಾರೆಯಾಗಿ, ಹತ್ತಿ ಪ್ರದೇಶದ ಸುಮಾರು 25-30 ಪ್ರತಿಶತವು ನೀರಾವರಿಯಲ್ಲಿದೆ. ಬೆಳೆಗಳ ನಡುವಿನ ಅಂತರ-ಬೇಸಾಯ ಚಟುವಟಿಕೆಗಳನ್ನು ಕೈಗೊಳ್ಳುವುದರ ಜೊತೆಗೆ, ರಸ ಹೀರುವ ಕೀಟಗಳ ನಿಯಂತ್ರಣಕ್ಕಾಗಿ ಕೀಟನಾಶಕ ಸಿಂಪರಣೆಯನ್ನು ಸಹ ಮಾಡಲಾಗುತ್ತಿದೆ. ಕ್ಷೇತ್ರ ವೀಕ್ಷಣೆ ಮಾಡಿದಾಗ ಕಳೆಗಳು, ಕೀಟಗಳು ಮತ್ತು ರೋಗಗಳ ಬಾಧೆ ವಿವಿಧ ಹಂತಗಳಲ್ಲಿ ಕಂಡು ಬಂದವು. ತದನುಸಾರ, ಶಿಫಾರಸು ಮಾಡಲಾದ ಬೆಳೆ ಸಂರಕ್ಷಣಾ ಪದ್ಧತಿಗಳನ್ನು ಅನುಸರಿಸಿ, ಸಕಾಲಿಕ ಮತ್ತು ಅಗತ್ಯಕ್ಕೆ ತಕ್ಕಂತೆ ನಿರ್ವಹಣಾ ಕ್ರಮಗಳನ್ನು ಕೈಗೊಳ್ಳಲು ರೈತರಿಗೆ ಸೂಚಿಸಲಾಯಿತು. ಆದಾಗ್ಯೂ, 60 ಮಿ. ಮೀ. ಮಳೆಯಾಗಿದ್ದರಿಂದಾಗಿ ಮುಂಚಿತವಾಗಿ ಬಿತ್ತನೆ ಮಾಡಿದ ಬೆಳೆಯು "ಅರ್ಧ ಸೊರಗು" ರೋಗದ (ಪ್ಯಾರಾವಿಲ್ಟ್) ಸಮಸ್ಯೆಗೆ ತುತ್ತಾಯಿತು.

ಚಾಮರಾಜನಗರದಲ್ಲಿ, ಹತ್ತಿ ಬೆಳೆಯು 121 ರಿಂದ 136 ದಿನಗಳ ಅವಧಿಯಲ್ಲಿ ಕಾಯಿ ಅಭಿವೃದ್ಧಿ ಯಿಂದ ಕಾಯಿ ಒಡೆಯುವ ಹಂತದಲ್ಲಿದೆ. ಸದ್ಯಕ್ಕೆ ಹತ್ತಿ ಬಿಡಿಸುವ ಕಾರ್ಯಗಳು ಪ್ರಗತಿಯಲ್ಲಿವೆ. ಎಲೆ ಜಿಗಿ ಹುಳುಗಳ ಬಾಧೆ (ಪ್ರತಿ 3 ಎಲೆಗಳಿಗೆ 03-04), ಹೇನುಗಳ ಬಾಧೆ (ಪ್ರತಿ 3 ಎಲೆಗಳಿಗೆ 10-15) ಹಾಗೂ ಗುಲಾಬಿ ಕಾಯಿ ಕೊರಕದ ಬಾಧೆ ಶೇ. 5-10 ಕ್ಕಿಂತ ಕಡಿಮೆ ಪ್ರಮಾಣದಲ್ಲಿರುವುದು ಕಂಡುಬಂದಿದೆ. ಇಲ್ಲಿಯವರೆಗೆ ಯಾವುದೇ ರೋಗಗಳ ಬಾಧೆ ಕಂಡುಬಂದಿಲ್ಲ.

**ಸಲಹೆ:**
ಧಾರವಾಡದಲ್ಲಿ, ರೈತರು ಕಳೆಗಳನ್ನು ನಿರ್ವಹಿಸಲು ಕೈಯಿಂದ ಕಳೆ ತೆಗೆಯುವುದು ಮತ್ತು ಅಂತರ ಕೃಷಿ ಕಾರ್ಯಾಚರಣೆಗಳನ್ನು ಕೈಗೊಳ್ಳಲು ಸೂಚಿಸಲಾಗಿದೆ. ಸೀಮಿತ ನೀರಾವರಿ ಸೌಲಭ್ಯದ ಸ್ಥಿತಿಯಲ್ಲಿ

ಹೂಬಿಡುವ ಮತ್ತು ಕಾಯಿ ಬೆಳವಣಿಗೆಯ ಹಂತದಲ್ಲಿ ಒಂದು ಅನಿವಾರ್ಯ ನೀರಾವರಿ ಒದಗಿಸಿ. ದೀರ್ಘಕಾಲದ ಶುಷ್ಕತೆಯಿಂದಾಗಿ ಬೆಳೆ ತೇವಾಂಶದ ಒತ್ತಡದಿಂದ ಬಳಲುತ್ತಿದ್ದರೆ, 10 ದಿನಗಳ ಮಧ್ಯಂತರದಲ್ಲಿ 150 ರಿಂದ 200 ಲೀಟರ್ ನೀರಿನಲ್ಲಿ ಎಕರೆಗೆ 2 ಕೆಜಿಯಂತೆ 13:00:45 ರ ಎರಡು ಸಿಂಪಡಣೆಗಳನ್ನು ಮಾಡಬೇಕು. ಬಲೆ ಬೆಳೆಯಾಗಿ ಬೆಳೆದ ಬೆಂಡೆಕಾಯಿಯಿಂದ ಮೂತಿ ಹುಳುಗಳನ್ನು ಕೈಯಿಂದ ಸಂಗ್ರಹಿಸಿ ನಾಶಪಡಿಸಬೇಕು. ರಿಂಗ್ ವಿಧಾನದ ಮೂಲಕ ರಂಜಕ ಮತ್ತು ಪೊಟ್ಯಾಶ್ ಗೊಬ್ಬರಗಳನ್ನು ಒದಗಿಸಬೇಕು. 75 ದಿನಗಳ ಬೆಳೆಗೆ 100 ಪಿಪಿಎಂ ಸ್ಪ್ರೇನಲ್ಲಿ ಸ್ಯಾಲಿಸಿಲಿಕ್ ಆಮ್ಲವನ್ನು ಸಿಂಪಡಿಸಬೇಕು. ರಸ ಹೀರುವ ಕೀಟಗಳನ್ನು ನಿಯಂತ್ರಿಸಲು ಫ್ಲೋನಿಕಾಮಿಡ್ 50 WG @ 0.4 ಗ್ರಾಂ ಪ್ರತಿ ಲೀಟರ್ ನೀರಿಗೆ ಅಥವಾ ಡಯಾಫೆಂಥಿಯುರಾನ್ 50 WP @ 1.2 ಗ್ರಾಂ ಪ್ರತಿ ಲೀಟರ್ ನೀರಿಗೆ ಬೆರೆಸಿ ಸಿಂಪಡಿಸಿ. ಗುಲಾಬಿ ಕಾಯಿ ಕೊರೆಯುವ ಹುಳದ ಚಟುವಟಿಕೆಯನ್ನು ಗಮನಿಸಲು ಎಕರೆಗೆ 2 ರಂತೆ ಲಿಂಗಾಕರ್ಷಕ (ಫೆರೋಮೋನ್) ಬಲೆಗಳನ್ನು ಅಳವಡಿಸಿ. ಗುಲಾಬಿ ಕಾಯಿ ಕೊರಕದ ಮರಿಹುಳುಗಳಿರುವ 'ರೋಸೆಟ್' ಹೂವುಗಳನ್ನು (ಅರಳದೆ ಮುಚ್ಚಿಕೊಂಡಿರುವ ಹೂವುಗಳು) ನಾಶಪಡಿಸಿ. ಹತ್ತಿಯ ಕಾಪು (ಮೊಗ್ಗು) ಮತ್ತು ಹೂವುಗಳು ನೈಸರ್ಗಿಕವಾಗಿ ಉದುರುವುದನ್ನು ತಪ್ಪಿಸಲು ಎನ್ ಎ ಎ @ 4 ಮಿಲಿ / 10 ಲೀಟರ್ ನೀರಿನಲ್ಲಿ ಎಲೆಗಳ ಮೇಲೆ ಸಿಂಪಡಿಸಿ. ಆಲ್ಟರ್ನೇರಿಯಾ ರೋಗವನ್ನು ನಿರ್ವಹಿಸಲು ಪೈರಾಕ್ಲೋಸ್ಟ್ರೋಬಿನ್ 5% + ಮೆಟಿರಾಮ್ 55% WG @ 3.5 ಗ್ರಾಂ ಪ್ರತಿ ಲೀಟರ್ ನೀರಿಗೆ ಸಿಂಪಡಿಸಿ.

ರಾಯಚೂರಿನಲ್ಲಿ, ಭೂಮಿ ಒಣಗುವುದನ್ನು ತಡೆಯಲು ರೈತರು ಕಳೆ ತೆಗೆಯುವಿಕೆ ಮತ್ತು ಅಂತರ ಬೇಸಾಯದ ಕೆಲಸಗಳಿಗೆ ಆದ್ಯತೆ ನೀಡುವಂತೆ ಸಲಹೆ ನೀಡಲಾಗಿದೆ. ನೀರಾವರಿ ಸೌಲಭ್ಯ ಸೀಮಿತವಾಗಿದ್ದಲ್ಲಿ, ಹೂಬಿಡುವ ಮತ್ತು ಕಾಯಿ ಕಟ್ಟುವ ಹಂತದಲ್ಲಿ ಬೆಳೆಯ ಉಳಿವಿಗೆ ಅತ್ಯಗತ್ಯವಾದ ಒಂದು ನೀರಾವರಿಯನ್ನು ಒದಗಿಸಿ. ದೀರ್ಘಕಾಲದ ಮಳೆಯ ಅಭಾವದಿಂದಾಗಿ ಬೆಳೆಯು ತೇವಾಂಶದ ಕೊರತೆಯಿಂದ ಬಳಲುತ್ತಿದ್ದರೆ, 10 ದಿನಗಳ ಅಂತರದಲ್ಲಿ ಎಕರೆಗೆ 2 ಕೆ.ಜಿ. ಯಷ್ಟು '13:00:45' ರಸಗೊಬ್ಬರವನ್ನು 150 ರಿಂದ 200 ಲೀಟರ್ ನೀರಿನಲ್ಲಿ ಬೆರೆಸಿ ಎರಡು ಬಾರಿ ಎಲೆಗಳ ಮೇಲೆ ಸಿಂಪಡಿಸಿ. ರಸ ಹೀರುವ ಕೀಟಗಳ ಸಂಖ್ಯೆಯು ಆರ್ಥಿಕ ಗರಿಷ್ಠ ಮಟ್ಟವನ್ನು ಮೀರಿದಾಗ, ಶಿಫಾರಸು ಮಾಡಲಾದ ಪ್ರಮಾಣದ 'ಫ್ಲೋನಿಕಮಿಡ್ 50% WG' (4 ಗ್ರಾಂ / 10 ಲೀಟರ್ ನೀರಿಗೆ) ಅನ್ನು ಸಿಂಪಡಿಸಿ. ಹಿಟ್ಟು ತಿಗಣೆ ಬಾಧೆಯನ್ನು ನಿಯಂತ್ರಿಸಲು, ಪ್ರತಿ ಲೀಟರ್ ನೀರಿಗೆ 2.5 ಮಿ.ಲೀ. 'ಪ್ರೊಫೆನೋಫಾಸ್ 50 EC' ಅಥವಾ 0.3 ಮಿ.ಲೀ. 'ಇಮಿಡಾಕ್ಲೋಪ್ರಿಡ್ 17.8 SL' ಅನ್ನು ಸಿಂಪಡಿಸಿ. ಹತ್ತಿ ಗಿಡದ ಮೊಗ್ಗುಗಳು ಮತ್ತು ಹೂವುಗಳು ಉದುರುವುದು ಕಂಡುಬಂದರೆ, ಅವು ಸಹಜವಾಗಿ ಉದುರುವುದನ್ನು ತಡೆಯಲು ಪ್ರತಿ 10 ಲೀಟರ್ ನೀರಿಗೆ 4 ಮಿ.ಲೀ. 'ಎನ್ ಎ ಎ' ಅನ್ನು ಎಲೆಗಳ ಮೇಲೆ ಸಿಂಪಡಿಸಿ.

ಚಾಮರಾಜನಗರದಲ್ಲಿ, ರಸ ಹೀರುವ ಕೀಟಗಳ ಹತೋಟಿಗೆ ಹಾಗೂ ಅವುಗಳ ಮೇಲೆ ನಿಗಾ ವಹಿಸಲು, ರೈತರು ಪ್ರತಿ ಎಕರೆಗೆ 8-12 ರಂತೆ ಹಳದಿ ಅಂಟು ಬಲೆಗಳನ್ನು ಮತ್ತು ಲಿಂಗಾಕರ್ಷಕ (ಫೆರೋಮೋನ್) ಬಲೆಗಳನ್ನು ಅಳವಡಿಸಿಕೊಳ್ಳಬೇಕು ಹಾಗೂ ಫೆರೋಮೋನ್ ಬಲೆಗಳ ಆಕರ್ಷಕಗಳನ್ನು (ಲೂರ್) ಪ್ರತಿ 15 ದಿನಗಳಿಗೊಮ್ಮೆ ಬದಲಾಯಿಸಬೇಕು. ಗುಲಾಬಿ ಕಾಯಿ ಕೊರಕದ ಬಾಧೆಯು ಶೇಕಡಾ 5 ಕ್ಕಿಂತ ಹೆಚ್ಚಾಗಿದ್ದರೆ, ಪ್ರತಿ ಎಕರೆಗೆ 500 ಮಿ.ಲೀ. ಪ್ರೊಫೆನೋಫಾಸ್ 50 EC ಅಥವಾ 100 ಗ್ರಾಂ ಎಮಾಮೆಕ್ಟಿನ್ ಬೆಂಜೊಯೇಟ್ 5SG ಅಥವಾ 200 ಮಿ.ಲೀ. ಇಂಡೋಕ್ಸಾಕಾರ್ಬ್ 15 EC ಅನ್ನು ಸಿಂಪಡಿಸಬೇಕು. ಬೆಳೆಯು 120 ದಿನಗಳಿಗಿಂತ ಹೆಚ್ಚು ಅವಧಿಯದ್ದಾಗಿದ್ದು, ಗುಲಾಬಿ ಕಾಯಿ ಕೊರಕದ ಬಾಧೆಯು ಆರ್ಥಿಕ ಹಾನಿಯ ಮಿತಿಗಿಂತ ಹೆಚ್ಚಾಗಿದ್ದರೆ, ಪ್ರತಿ 10 ಲೀಟರ್ ನೀರಿಗೆ 10-15 ಮಿ.ಲೀ. ಸೈಪರ್‌ಮೆಥ್ರಿನ್ 10% EC ಅಥವಾ 10 ಮಿ.ಲೀ. ಡೆಲ್ಟಾಮೆಥ್ರಿನ್ 2.8 EC ಅಥವಾ 10 ಮಿ.ಲೀ. ಫೆನ್‌ಪ್ರೊಪಾಥ್ರಿನ್ 10% EC ಅನ್ನು ಬೆರೆಸಿ ಸಿಂಪಡಿಸಬೇಕು.

*ಭಾ. ಕೃ. ಅ. ಪ. – ಕೇಂದ್ರೀಯ ಹತ್ತಿ ಸಂಶೋಧನಾ ಸಂಸ್ಥೆ, ನಾಗಪುರ*

*ಕನ್ನಡ ಅನುವಾದ*

*ಡಾ. ನೀಲಕಂಠ ಸ. ಹಿರೇಮನಿ*